ದಿಃ **12-12-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಐಎಂಪಿ. ವಕೀಲರಿಂದಃ**

ಸರ್ವೇ ನಂ.153 ಜಮಿನು ನನ್ನ ಅಜ್ಜಿ ಬಸಲಿಂಗಮ್ಮ ಇವರ ಹೆಸರಿಗೆ ದಾಖಲಿತು ಎಂದರೆ ನಿಜ. ಸದರಿಆಸ್ತಿ ಬಸಲಿಂಗಮ್ಮ ಇವರುನಿಂದ 2 ನೆ ಪ್ರತಿವಾದಿ ಕೆ ಬಸನಗೌಡ ಇವರ ಹೆಸರಿಗೆ ಬಂದಿರುತ್ತದ ಎಂದರೆ ನಿಜ. ಸದರಿ ಆಸ್ತಿ ಮುಟೇಶನ ಆದೇಶ ನಂ 58 ರಂತೆ ದಿಃ 24.12.1998 ರಂದು ಅವರ ಹೆಸರಿಗೆ ದಾಖಲಾಗಿರುತ್ತದ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನು ಬಸಲಿಂಗಮ್ಮ ಇವಳು 2 ನೇ ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

2. ಸರ್ವೇ ನಂ 154 ಜಮಿನು 5 ನೇ ಪ್ರತಿವಾದಿ ಗಿರಿಜಮ್ಮ ಇವರ ಪಾಲಿಗೆ ಬಂದಿತು ಎಂದರೆ ಸರಿಯಲ್ಲ. ಸೀಲಿಂಗ ಕಾಯದೆ ಅಡಿ ನಮ್ಮ ಕುಟುಂಬದ ಜಮೀನು ಸರಕಾರಕ್ಕೆ ಹೊಗಬಾರದು ಎಂಬ ಕಾರಣಕ್ಕೆ ನನ್ನ ಅಜಿ ಸದರಿ ಜಮೀನನು 5 ನೇ ಪ್ರತಿವಾದಿಯ ಹೆಸರಿಗೆ ದಾಖಲಿಸಿದ್ದರು. ಸದರಿ ಜಮೀನು ನನ ತಂದೆ ಮತು ಅವರ ಸಹೊದರ , ಸಹೊದರಿಯರು ವಿಬಾಗ ಮಾಡಿಕೊಂಡ ಸಮಯದಲಿ 5 ನೇ ಪ್ರತಿವಾದಿ ಗಿರಿಜಮ್ಮ ಇವರ ಪಾಲಿಗೆ ಹೊಗಿತ್ತು ಎಂದರೆ ಸರಿಯಲ್ಲ. ಸದರಿ ಜಮೀನು 5 ನೇ ಪ್ರತಿವಾದಿಯ ಸ್ವಂತ ಹಕ್ಕಿನ ಜಮಿನು ಎಂದೆರ ಸರಿಯಲ್ಲ. 5 ನೇ ಪ್ರತಿವಾದಿ ಪ್ರಿತಿಯಿಂದ ಸದರಿ ಜಮೀನನು ನೊಂದಾಯಿತ ದಾನ ಪತ್ರದ ಮೂಲಕ 3 ನೆ ಪ್ರತಿವಾದಿ ನೀಡಿರುತಾರೆ ಎಂದರೆ ಸರಿಯಲ್ಲ. ಸಾಕ್ಷಿ ಸಿಲಿಂಗ್ ಕಾಯಿದೆ ಅಡಿ ಸದರಿ ಜಮೀನನು ಕುಟುಂಬಕೆ ಉಳಿಸಿಕೊಳ್ಳಲು 5 ನೇ ಪ್ರತಿವಾದಿಗೆ ನೀಡಿದ ಜಮೀನನು ಮರಳಿ ನನ್ನ ತಂದೆ ಶರಣಗೌಡ ಎಂಬುವರ ಹೆಸರಿಗೆ ವರ್ಗಾಯಿಸಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ದಾಖಲೆಯ ಪ್ರಕಾರ ಆ ರೀತಿ ಮರಳಿ ಸದರಿ ಜಮೀನನು ಕುಟುಂಬಕೆ ಪಡೆಯಲಾಯಿತು ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ಜಮೀನನು ನನ್ನ ತಂದೆ ತನ್ನ ಮಕ್ಕಳ ಹೆಸರಿಗೆ ವರ್ಗಾಯಿಸಿರುವುದಾಗಿ ಸುಳು ಸಾಕ್ಷಿ ಹೇಳುತಿದೇನೆ ಎಂದರೆ ಸರಿಯಲ್ಲ.

3. ಸರ್ವೇ ನ. 191 ಇದು ಕಮಲಮ್ಮ ಎಂಬುವರ ಹೆಸರಿನಲಿ ಇತ್ತು. ನನ್ನ ತಂದೆ , ಅವರ ಸಹೊದರ , ಸಹೊದರಿಯರು ವಿಬಾಗ ಮಾಡಿಕೊಂಡ ಸಮಯದಲಿ ಸರ್ವೇ ನ. 191 ಜಮೀನನು ಕ್ಷೇತ್ರ 12 ಎಕರೆ 22 ಗುಂಟೆ ತನ್ನ ತಾತ ಬಸ್ಸಪ್ಪ ಇವನ ಹೆಸರಿನಲಿ ಇರಿಸಲಾಗಿತು ಎಂದರೆ ನಿಜ. ನ್ನನ ತಾತನ ಮರಣ ನಂತರ ಕುಟುಂಬದ ವಿಬಾಗದ

ಸಮಯದಲ್ಲಿ ಆದ ಮಾತುಕತೆಯಂತೆ ನನ್ನ ತಂದೆ ಹೆಸರಿಗೆ 4 ಎಕರೆ ಜಮೀನು ಮತು ನನ್ನ ದೊಡ್ಡಪ್ಪ ನ ಕುಟುಂಬಕೆ 8 ಎಕರೆ 22 ಗುಂಟೆ ಜಮೀನು ಪಾಲಿಗೆ ಹೋಗಿರುತ್ತದ ಎಂದರೆ ಸರಿಯಲ್ಲ, ಸಾಕ್ಷಿ ಸಮಾನಾಗಿ ಪಾಲು ನಿಡಿರುವುದಾಗಿ ನುಡಿಯುತ್ತಾರೆ. ಸದರಿ ಜಮೀನು ಈಗ ನನ್ನ ತಂದೆಯ ಹಸೆರಿನಲ್ಲಿ 6 ಎಕರೆ 11 ಗುಂಟೆ ಮತು ನನ್ನ ದೊಡ್ಡಪ್ಪನ ಕುಟುಂಬದ ಸದಸ್ಯರ ಹೆಸರಿನಲ್ಲಿ 6 ಎಕರೆ 11 ಗುಂಟೆ ದಾಖಲಿಸಿರುತ್ತದೆ. ಆ ರೀತಿ ನನ್ನ ತರೆದೆಯ ಪಾಲಿಗೆ 6 ಎಕರೆ 11 ಗುಂಟೆ ಜಮೀನು ಪಾಲಿಗೆ ಬಂದಿರುವುದಾಗಿ ಸುಳು ಸಾಕ್ಷಿ ಹೇಳುತಿದೇನೆ ಎಂದರೆ ಸರಿಯಲ್ಲ. ನನ್ನ ತರೆದೆಯ 4 ಎಕರೆ ಪಾಲಿನಲಿ ಮಾತ್ರ ನನಗೆ ಹಕ್ಕು ಇದೆ ಎಂದರೆ ಸರಿಯಲ್ಲ.

4. ಕಲ್ಲೂರಿನಲ್ಲಿ ಇರುವ ದೊಡ್ಡ ಮನೆ ನಮ್ಮ ತಂದೆಯ ಪಾಲಿಗೆ ಬಂದಿತು ಎಂದರೆ ನಿಜ. ನನ್ನ ತಂದೆ 1969-70 ರಲಿ ವಿಭಾಗದ ಪ್ರಕಾರ ತನ್ನ ಹೆಸರನ್ನು ಸದರಿ ಆಸ್ತಿಗೆ ದಾಖಲಿಸಿಕೊಂಡಿರುತ್ತಾರೆ ಎಂದರೆ ನಿಜ. ಸರ್ವೇ ನಂ 191 ರಲ್ಲಿ 4 ಎಕರೆ ಜಮೀನನು ಹೊರತುಪಡಿಸಿ ಉಳಿದ ಎಲಾ ದಾವ ಆಸ್ತಿಗಳು ಪ್ರತಿವಾದಿಯರ ಸ್ವಂತ ಆಸ್ತಿಗಳು ಆಗಿದ್ದು ಅವುಗಳಲಿ ನಮಗೆ ಯಾವುದೇ ಹಕ್ಕು ಅಥವಾ ಪಾಲು ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು : 7 ನೇ ಪ್ರತಿವಾದಿ ಪರ ಶ್ರೀ ಕೆಪಿ ಆರ್ ವಕೀಲರಿಂದಃ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

ಓದಿ ಹೇಳಿ ಸಹಿಪಡೆಯಲಾಗಿದೆ

3ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಯಚೂರು.